# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** ಶ್ರೀ ರಮೇಶ ಕೆ, ಕಾರ್ಯದರ್ಶಿ, ಕಣ್ಣೂರು ಗ್ರಾಮಪಂಚಾಯತಿ, ಬಿದರಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.

**ಓದಲಾಗಿದೆ:** ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ **D.O.No: Compt/UPLOK/BCD-667/2016/ARLO-1, ದಿ: 06.10.2017.**

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ:21.09.2017 ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಕೆ ಸಿ ನಂಜೇಗೌಡ, ಕಣ್ಣೂರು ಅಂಚೆ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ ರಮೇಶ ಕೆ, ಕಾರ್ಯದರ್ಶಿ, ಕಣ್ಣೂರು ಗ್ರಾಮಪಂಚಾಯತಿ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ (ಇನ್ನು ಮುಂದೆ "ಎದುರುದಾರರು" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ಎದುರುದಾರರು ಸುಮಾರು 15 ವರ್ಷಗಳ ಕಾಲ ಕಣ್ಣೂರು ಗ್ರಾಮ ಪಂಚಾಯತಿಯಲ್ಲಿ ಕರವಸೂಲಿಗಾರರಾಗಿದ್ದು, ಆ ನಂತರ ಕಾರ್ಯದರ್ಶಿಯಾಗಿ ಪದೋನ್ನತಿ ಹೊಂದಿದ್ದಾರೆ. ಸದರಿಯವರು ಪಂಚಾಯತಿಯ ಅನುದಾನವನ್ನು ತಮ್ಮ ಸ್ವಂತಕ್ಕೆ ಬಳಸಿಕೊಂಡು ತಮ್ಮ ಚಿಕ್ಕಪ್ಪ ಶ್ರೀ ಕೆ ಪಿ ರಾಜಣ್ಣ ಎಂಬುವವರ ಹೆಸರಿಗೆ ರೂ.17,50,700/–ನ್ನು ಸುಳ್ಳು ಬಿಲ್ಲುಗಳ ಮೂಲಕ ಮತ್ತು ಶ್ರೀ ಮಂಜುನಾಥ ಎಂಬುವವರಿಗೆ ರೂ.1,12,050/–ಗಳನ್ನು ಡ್ರಾ ಮಾಡಿದ್ದಾರೆ. ತಮ್ಮ ಪಂಚಾಯತಿ ವ್ಯಾಪ್ತಿಗೆ ಸಂಬಂಧಿಸಿದ ಜಮೀನುಗಳನ್ನು ತಲಾ ರೂ.1 ಲಕ್ಷದಂತೆ ಹಣ ಪಡೆದು ಇ–ಖಾತೆ ಮಾಡಿದ್ದಾರೆ. ತಮ್ಮ ಹೆಸರಿನಲ್ಲಿ ಸುಮಾರು ರೂ.2 ಕೋಟಿ ಬೆಲೆ ಬಾಳುವ ಮನೆ ನಿರ್ಮಿಸಿದ್ದು, ತಮ್ಮ ಸಂಬಂಧಿಗಳ ಹೆಸರಿನಲ್ಲಿ ಬೇನಾಮಿ ಆಸ್ತಿ ಹೊಂದಿರುವುದಾಗಿ ಹೇಳಿದ್ದಾರೆ.

ದೂರಿನ ತನಿಖೆಯನ್ನು ಕೈಗೊಂಡು ವರದಿಯನ್ನು ಸಲ್ಲಿಸುವಂತೆ ಈ ಸಂಸ್ಥೆಯ ಅಪರ ಪೋಲಿಸ್ ಮಹಾ ನಿರ್ದೇಶಕರನ್ನು ಕೇಳಲಾಗಿ, ಆರಕ್ಷಕ ಅಧೀಕ್ಷಕ–2 ರವರು (ಇನ್ನು ಮುಂದೆ 'ತನಿಖಾಧಿಕಾರಿಗಳು' ಎಂದು ಕರೆಯಲ್ಪಡುತ್ತಾರೆ) ತನಿಖೆ ಕೈಗೊಂಡು ತಮ್ಮ ತನಿಖಾ ವರದಿಯಲ್ಲಿ–

ಎದುರುದಾರರು 2012 ರಿಂದ 2015 ರವರೆಗೆ ಕುಡಿಯುವ ನೀರು ಸರಬರಾಜು ಮಾಡಲು ಸಭೆ ಕರೆದು ಟೆಂಡರ್ ಮೂಲಕ ನೀರು ಸರಬರಾಜು ಮಾಡಲು ಗುತ್ತಿಗೆ ನೀಡಲು ತೀರ್ಮಾನಿಸಿ, ಕನಿಷ್ಟ ದರ ನೀಡಿದ ಗುತ್ತಿಗೆದಾರರಿಗೆ ಟೆಂಡರ್ ನೀಡಿದ್ದು, ನಂತರ ಬಿಲ್ಲುಗಳನ್ನು ಪಾವತಿಸಿದೆ. ಟ್ರ್ಯಾಕ್ಟರ್ ಮಾಲೀಕರಾದ ಶ್ರೀ ಕೆ ಪಿ ಅಂಕಪ್ಪ ಮತ್ತು ಶ್ರೀ ರಾಜಣ್ಣ ರವರು ಎದುರುದಾರರ ಚಿಕ್ಕಪ್ಪಂದಿರಾಗಿದ್ದು, ಟೆಂಡರ್‌ನಲ್ಲಿ ಭಾಗವಹಿಸಿ, ಗುತ್ತಿಗೆ ಪಡೆದು ನೀರು ಸರಬರಾಜಾದ ಬಳಿಕ ಬಿಲ್ಲುಗಳನ್ನು ಟೆಂಡರ್‌ದಾರರ ಖಾತೆಗೆ ಪಾವತಿಸಿದೆ. ಸದರಿ ಪಂಚಾಯತ್ ವ್ಯಾಪ್ತಿಗೆ ಸಂಬಂಧಪಟ್ಟಂತೆ ಇ–ಖಾತೆಯನ್ನು ಕಾನೂನು ರೀತಿ ದಾಖಲೆಗಳನ್ನು ಪರಿಶೀಲಿಸಿ ಮಾಡಲಾಗಿದೆ. ಪಂಚಾಯತ್ ವ್ಯಾಪ್ತಿಯ ಕಸ ವಿಲೇವಾರಿಗೆ ಸಂಬಂಧಪಟ್ಟಂತೆ ಟೆಂಡರ್ ಮೂಲಕ ಹರಾಜು ಮಾಡಿ ಟ್ರ್ಯಾಕ್ಟರ್ ಮಾಲೀಕರಾದ ಶ್ರೀ ಮಂಜುನಾಥ ರವರಿಗೆ ರೂ.1,12,050/–ನ್ನು ಚೆಕ್ ಮೂಲಕ ನೀಡಿದೆ. ಎದುರುದಾರರು ರೂ.2 ಕೋಟಿ ಮೌಲ್ಯದ ಬಂಗಲೆ ಕಟ್ಟಿಸಿದ್ದಾರೆ ಮತ್ತು ಬೇನಾಮಿ ಹೆಸರಿಗಳಲ್ಲಿ ಆಸ್ತಿ ಹೊಂದಿದ್ದಾರೆಂಬುದು ಸಾಬೀತಾಗಿಲ್ಲ. ಈ ಬಗ್ಗೆ 2014–15 ಮತ್ತು 2015–16ನೇ ಸಾಲಿನ ಆಸ್ತಿ ಧಾಯಿತ್ವ ಪಟ್ಟಿಯಲ್ಲಿ ಆಸ್ತಿಗಳನ್ನು ಘೋಷಿಸಿಕೊಂಡಿದ್ದಾರೆ. ದೂರುದಾರರು ತಪ್ಪು ಮಾಹಿತಿ ಆಧಾರದ ಮೇಲೆ ಎದುರುದಾರರ ವಿರುದ್ಧ ಈ ಸುಳ್ಳು ದೂರನ್ನು ನೀಡಿದ್ದು, ಕಾರಣ ಸದರಿ ದೂರನ್ನು ಮುಕ್ತಾಯಗೊಳಿಸಲು ಹೇಳಿದ್ದಾರೆ.

ತನಿಖಾಧಿಕಾರಿಗಳ ವರದಿಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ.

<u>ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-</u>

ದೂರುದಾರರು ತಮ್ಮನ್ನು ವರ್ಗಾವಣೆ ಮಾಡುವ ಉದ್ದೇಶದಿಂದ ಈ ಸುಳ್ಳು ದೂರನ್ನು ನೀಡಿದ್ದಾರೆ. ತಮ್ಮ ಚಿಕ್ಕಪ್ಪ ಶ್ರೀ ಕೆ ಪಿ ರಾಜಣ್ಣ ರವರ ಹೆಸರಿನಲ್ಲಿ ನಕಲಿ ರಸೀದಿಗಳನ್ನು ಸೃಷ್ಟಿಸಿ ರೂ.17,50,000/-ಗಳನ್ನು ಡ್ರಾ ಮಾಡಿರುವ ಅಂಶ ಸುಳ್ಳಿನಿಂದ ಕೂಡಿದೆ. ತಾವು ಯಾವುದೇ ಇ-ಖಾತೆ ನೀಡಿಲ್ಲ. ಟ್ರ್ಯಾಕ್ಟರ್ ಚಾಲಕ ಶ್ರೀ ಮಂಜುನಾಥ ರವರಿಗೆ ರೂ.1,12,050/-ನ್ನು ಕಸ ವಿಲೇವಾರಿ ಮಾಡಿದ ಸಂಬಂಧ ನೀಡಲಾಗಿದೆಯೆಂಬುದು ಸುಳ್ಳಿನಿಂದ ಕೂಡಿದೆ. ತಾವು ರೂ.2 ಕೋಟಿ ವೆಚ್ಚದಲ್ಲಿ ಮನೆ ನಿರ್ಮಿಸಿದೆಯೆಂಬುದು ಸುಳ್ಳಿನಿಂದ ಕೂಡಿದೆಯೆಂದು ಹೇಳಿದ್ದಾರೆ.

ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ಯಾವುದೇ ಪ್ರತ್ಯುತ್ತರವನ್ನು ನೀಡಿರುವುದಿಲ್ಲ.

<u>ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ ಕಂಡು ಬರುವ ಅಂಶಗಳೇನೆಂದರೆ:</u>

ಎದುರುದಾರರು ದಿನಾಂಕ:27/10/1993 ರಂದು ತಾತ್ಕಾಲಿಕ ಕರ ವಸೂಲಿಗಾರರಾಗಿ ನೇಮಕಗೊಂಡು ಕಣ್ಣೂರು ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ದಿನಾಂಕ:02/12/13 ರಂದು ಕಾರ್ಯದರ್ಶಿಯಾಗಿ ಬಡ್ತಿ ಹೊಂದಿ, ಸದರಿ ಗ್ರಾಮ ಪಂಚಾಯತಿಯಲ್ಲಿ ಮುಂದುವರೆದಿದ್ದು, ಪ್ರಸ್ತುತ ಚಿಕ್ಕಜಾಲ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. 2012 ರಿಂದ 2015ನೇ ಸಾಲಿನವರೆಗೆ ನೀರು ಸರಬರಾಜು ಮಾಡುವ ಬಗ್ಗೆ ಟೆಂಡರ್ ಕರೆದಿದ್ದು, ಅದರಲ್ಲಿ ಎದುರುದಾರರ ಚಿಕ್ಕಪ್ಪ ಶ್ರೀ ಕೆ ಪಿ ರಾಜಣ್ಣ ಎಂಬುವವರು ಭಾಗವಹಿಸಿ, ಸದರಿ ನೀರು ಸರಬರಾಜಿಗೆ ಸಂಬಂಧಪಟ್ಟಂತೆ ರೂ.17,50,700/-ನ್ನು ನೀಡಿರುವುದು ದಾಖಲೆಗಳಿಂದ ಕಂಡು ಬಂದಿದೆ. ಈ ಅಂಶವನ್ನು ಸುಳ್ಳು ಎಂದು ಅಲ್ಲಗಳೆದಿದ್ದಾರೆ, ಬದಲಾಗಿ ಶ್ರೀ ಕೆ ಪಿ ರಾಜಣ್ಣ ಎಂಬುವವರು ತಮ್ಮ ಚಿಕ್ಕಪ್ಪ ಎಂಬ ವಿಷಯ ಗೊತ್ತಿದ್ದರೂ ಸಹ ಸದರಿ ನೀರು ಸರಬರಾಜು ಮಾಡಲು ಟೆಂಡರ್ ನೀಡಿ, ಬಿಲ್ ಪಾವತಿಸಿ ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿದೆ. ಆದರೆ, ಸದರಿ ಟೆಂಡರ್ ಪ್ರಕ್ರಿಯೆ ನಡೆದಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ ಮತ್ತು ಸದರಿ ಟೆಂಡರ್‌ನಲ್ಲಿ ಭಾಗವಹಿಸಿದ ಇತರೆ ಟೆಂಡರ್‌ದಾರರ ಮಾಹಿತಿಯಿಲ್ಲ. ಸದರಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಸ ವಿಲೇವಾರಿಗೆ ಸಂಬಂಧಿಸಿದಂತೆ, ಶ್ರೀ ಮಂಜುನಾಥ ಎಂಬುವವರಿಗೆ ರೂ.1,12,050/-ಗಳನ್ನು ಪಾವತಿಸಿರುವುದು ಕಂಡುಬಂದಿದೆ. ಈ ಅಂಶವನ್ನು ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ಹೇಳಿದ್ದಾರೆ. ಆದರೆ, ಎದುರುದಾರರು ಈ ಅಂಶವನ್ನು ಸುಳ್ಳೆಂಬುದಾಗಿ ಅಲ್ಲಗಳೆದಿದ್ದಾರೆ. ಸದರಿ ಗ್ರಾಮ ಪಂಚಾಯತ್ ವ್ಯಾಪ್ತಿಗೆ ಸಂಬಂಧಪಟ್ಟಂತೆ ಕಸ ವಿಲೇವಾರಿ ಮಾಡಲು ಟೆಂಡರ್ ಪ್ರಕ್ರಿಯೆ ನಡೆದಿರುವ ಬಗ್ಗೆ ಹಾಗೂ ಟೆಂಡರ್‌ನಲ್ಲಿ ಭಾಗವಹಿಸಿದ ಇತರೆ ಟೆಂಡರ್‌ದಾರರ ಬಗ್ಗೆ ಯಾವುದೇ ಮಾಹಿತಿಯಿಲ್ಲ. ಎದುರುದಾರರಿಗೆ ಸಂಬಂಧಪಟ್ಟ 2013-14 ರಿಂದ 2014-15 ರವರೆಗಿನ ಆಸ್ತಿ ಧಾಯಿತ್ವ ಪಟ್ಟಿಯಲ್ಲಿ ತಮ್ಮ ತಂದೆಯ ಹೆಸರಿನಲ್ಲಿ ಸುಮಾರು 13 ಜಮೀನುಗಳಿವೆ. ಅದೇ ರೀತಿ ಎದುರುದಾರರು ತಾವು ಕೆಲಸಕ್ಕೆ ಸೇರಿದ ನಂತರ ತಮ್ಮ ಹೆಸರಿನಲ್ಲಿ ಈ ಕೆಳಕಂಡ ಚರ ಮತ್ತು ಸ್ಥಿರಾಸ್ತಿಗಳನ್ನು ಖರೀದಿಸಿದ್ದಾರೆ-

1. ದಿ:29.10.2011 ರಂದು ಚಿಕ್ಕಗುಬ್ಬಿ ಗ್ರಾಮದಲ್ಲಿ ಖಾತೆ ನಂ.837 ವಿಸ್ತೀರ್ಣ 50*30 ಅಡಿ ನಿವೇಶನವನ್ನು ರೂ.8 ಲಕ್ಷಕ್ಕೆ ಖರೀದಿಸಿದೆ.
2. ಶಿಡ್ಲಘಟ್ಟ ತಾಲ್ಲೂಕು ಪುರ ಗ್ರಾಮದ ಸರ್ವೇ ನಂ.36/1 ರಲ್ಲಿ 26 ಗುಂಟೆ ಜಮೀನನ್ನು ರೂ.1,26,000/-ಗಳಿಗೆ ದಿ:08.03.2013 ರಂದು ಖರೀದಿಸಿದ್ದು, ಇದರಿಂದ ವಾರ್ಷಿಕ ಆದಾಯ ರೂ.10,000/-.
3. ಶಿಡ್ಲಘಟ್ಟ ತಾಲ್ಲೂಕು ನಾಗಮಂಗಲ ಗ್ರಾಮದ ಸರ್ವೇ ನಂ.99/5ರಲ್ಲಿ 18 ಗುಂಟೆ ಜಮೀನನ್ನು ರೂ.1,20,000/-ಗಳಿಗೆ ದಿ:28.09.2013 ರಂದು ಖರೀದಿಸಿದ್ದು, ಇದರಿಂದ ವಾರ್ಷಿಕ ಆದಾಯ ರೂ.10,000/-.
4. ಶಿಡ್ಲಘಟ್ಟ ತಾಲ್ಲೂಕು ನಾಗಮಂಗಲ ಗ್ರಾಮದ ಸರ್ವೇ ನಂ.100/5ರಲ್ಲಿ 25 ಗುಂಟೆ ಜಮೀನನ್ನು ರೂ.1,26,000/-ಗಳಿಗೆ ದಿ:28.09.2013 ರಂದು ಖರೀದಿಸಿದ್ದು, ಇದರಿಂದ ವಾರ್ಷಿಕ ಆದಾಯ ರೂ.15,000/-.
5. ರೂ.4,50,000/-ಗಳಿಗೆ ಒಂದು ಫೋರ್ಡ ಕಾರನ್ನು ಖರೀದಿಸಿದೆ.
6. ರೂ.50,000/-ಗಳಿಗೆ ಒಂದು ಹೊಂಡಾ ಆಕ್ಟಿವಾ ದ್ವಿಚಕ್ರ ವಾಹನವನ್ನು ಖರೀದಿಸಿದೆ.
7. ರೂ.50,000/-ಗಳಿಗೆ ಒಂದು ಮಾರುತಿ 800 ಕಾರ್‌ನ್ನು ಖರೀದಿಸಿದೆ.
8. ರೂ.1,20,000/-ಗಳಿಗೆ ಒಂದು ಟ್ರ್ಯಾಕ್ಟರ್ ಖರೀದಿಸಿದೆ.

9. ರೂ.10 ಲಕ್ಷ ಬೆಲೆ ಬಾಳುವ 2 ಕೆಜಿ 210 ಗ್ರಾಂ ಚಿನ್ನದ ಒಡವೆಗಳು.

10. ರೂ.5 ಲಕ್ಷ ಬೆಲೆ ಬಾಳುವ 10 ಕೆಜಿ 750 ಗ್ರಾಂ ಬೆಳ್ಳಿ ಸಾಮಾನುಗಳು.

ಎದುರುದಾರರು ಈ ರೀತಿ ಚರ ಮತ್ತು ಸ್ಥಿರಾಸ್ತಿಗಳನ್ನು ಖರೀದಿ ಮಾಡುವ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆದಿರುವ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 6 ಸೇನನಿ 88, ದಿನಾಂಕ:17.09.1983ರ ಅಧಿಕೃತ ಜ್ಞಾಪನ ರೀತ್ಯಾ "ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, ನಿಯಮ 23(2) ಮತ್ತು 23(3)(ಎ) ಪ್ರಕಾರ, ಯಾವುದೇ ಸರ್ಕಾರಿ ನೌಕರ ತಾವು ನಡೆಸುವ ಎಲ್ಲಾ ವ್ಯವಹಾರಗಳನ್ನು ವಾರ್ಷಿಕ ಅಂತ್ಯದಲ್ಲಿ ವ್ಯವಹಾರಗಳು ಪೂರ್ಣಗೊಂಡ 1 ತಿಂಗಳೊಳಗೆ ನಿಗದಿತ ಪ್ರಾಧಿಕಾರಿಗಳಿಗೆ ಕಡ್ಡಾಯವಾಗಿ ಸೂಕ್ತ ವಿವರಣೆಯೊಂದಿಗೆ ವರದಿ ಮಾಡಬೇಕೆಂದು" ಹೇಳಿದೆ. ಆದರೆ, ಎದುರುದಾರರು ತಮ್ಮ ಸೇವಾವಧಿಯಲ್ಲಿ ನಡೆಸಿದ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಸಕ್ಷಮ ಪ್ರಾಧಿಕಾರದ ಮುಂದೆ ವರದಿ ಮಾಡಿಲ್ಲ. ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, ನಿಯಮ 23(2)ರಂತೆ ಪ್ರತಿಯೊಬ್ಬ ಸರ್ಕಾರಿ ನೌಕರರು ಮಾರ್ಚ ತಿಂಗಳಿಗೆ ಕೊನೆಗೊಳ್ಳುವಂತೆ ತಮ್ಮ ಕುಟುಂಬದ ಸದಸ್ಯರೆಲ್ಲರ ಆಸ್ತಿ ಮತ್ತು ಋಣಬಾರ ಪಟ್ಟಿಯನ್ನು ಸಲ್ಲಿಸಬೇಕಾಗುವುದು ಕಡ್ಡಾಯವಾಗಿದೆ. ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು, ನಿಯಮ 23(2)ರಂತೆ ಯಾವುದೇ ಸರ್ಕಾರಿ ನೌಕರ ಯಾವುದೇ ಕೃಷಿ ಜಮೀನು, ಕಟ್ಟಡ, ಚರ ಮತ್ತು ಸ್ಥಿರ ಆಸ್ತಿಗಳನ್ನು ತಮ್ಮ ಅಥವಾ ತಮ್ಮ ಕುಟುಂಬದವರ ಹೆಸರಿನಲ್ಲಿ ಖರೀದಿ, ಭೋಗ್ಯ, ದಾನ, ವಿಲ್ ಮೂಲಕ ವರ್ಗಾವಣೆ ಮಾಡುವ ಮುನ್ನ ತಮ್ಮ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆಯಬೇಕೆಂಬ ಕಡ್ಡಾಯ ನಿಯಮಗಳಿದ್ದು, ಆದರೆ ಎದುರುದಾರರು ತಮ್ಮ ಹೆಸರಿನಲ್ಲಿ ಚರ ಮತ್ತು ಸ್ಥಿರಾಸ್ತಿ ಅರ್ಜಿಸಿರುವ ಬಗ್ಗೆ ಪೂರ್ವಾನುಮತಿಯನ್ನು ಪಡೆದಿಲ್ಲ. ತನಿಖಾಧಿಕಾರಿಗಳು ತನಿಖಾ ಸಂದರ್ಭದಲ್ಲಿ ಎದುರುದಾರರು ತಾವು ಸೇವೆಗೆ ಸೇರಿದ ದಿನದಿಂದ ನಿವೃತ್ತಿ ಹೊಂದುವ ದಿನದವರೆಗೆ ಪಡೆದ ವೇತನದ ಬಗ್ಗೆ ಯಾವುದೇ ತನಿಖೆ ನಡೆಸಿಲ್ಲ ಮತ್ತು ಯಾವುದೇ ದಾಖಲೆಗಳಿಲ್ಲ. ಅಲ್ಲದೇ, ಸದರಿ ಅವಧಿಯಲ್ಲಿ ತಮ್ಮ ವೇತನದಲ್ಲಿ ಮಾಡಿದ ಖರ್ಚು-ವೆಚ್ಚಗಳ ಬಗ್ಗೆ, ತಮ್ಮ ಮಕ್ಕಳ ವಿದ್ಯಾಭ್ಯಾಸದ ಖರ್ಚು, ಕುಟುಂಬ ನಿರ್ವಹಣಾ ವೆಚ್ಚಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳಿಲ್ಲ. ಅದೇ ರೀತಿ, ಎದುರುದಾರರು ತಮ್ಮ ಸಂಬಳ ಮತ್ತು ಇತರೆ ಮೂಲಗಳಿಂದ ಬಂದ ಆದಾಯದ ಬಗ್ಗೆ ಆದಾಯ ತೆರಿಗೆ ಇಲಾಖೆಯ ಮುಂದೆ ವರದಿ ಮಾಡಿಲ್ಲ. ಕಾರಣ, ಎದುರುದಾರರು ತಮ್ಮ ಹೆಸರಿನಲ್ಲಿ ಅಕ್ರಮ ಆಸ್ತಿಯನ್ನು ಗಳಿಸಿರುವುದು ದಾಖಲೆಗಳಿಂದ ಕಂಡುಬಂದಿದೆ.

ಮೇಲ್ಕಂಡ ಅಂಶಗಳು ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು, ತನಿಖಾಧಿಕಾರಿಗಳ ವರದಿ ಮತ್ತು ಎದುರುದಾರರು ನೀಡಿರುವ ಆಕ್ಷೇಪಣೆಯನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠತೆ ಮತ್ತು ಸರ್ಕಾರಿ ಸೇವಕರಿಗೆ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ದುರ್ನಡತೆ ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ.

ಆದ್ದರಿಂದ, ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ಸಾರ್ವಜನಿಕ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮಾವಳಿ, 1966ರ ನಿಯಮ 3(1)ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಲ್ಲಿ ಶ್ರೀ ರಮೇಶ ಕೆ, ಕಾರ್ಯದರ್ಶಿ, ಕಣ್ಣೂರು ಗ್ರಾಮಪಂಚಾಯತಿ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14 (ಎ)ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/784/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 02-11-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ರಮೇಶ ಕೆ, ಕಾರ್ಯದರ್ಶಿ, ಕಣ್ಣೂರು ಗ್ರಾಮಪಂಚಾಯತಿ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು-1, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ 1 ರಿಂದ 103 ರವರೆಗಿನ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ಬೆಂಗಳೂರು ಪೂರ್ವ, ಬೆಂಗಳೂರು ನಗರ ಜಿಲ್ಲೆ.
6. ಶ್ರೀ ರಮೇಶ ಕೆ, ಕಾರ್ಯದರ್ಶಿ, ಕಣ್ಣೂರು ಗ್ರಾಮಪಂಚಾಯತಿ, ಬಿದರಹಳ್ಳಿ ಹೋಬಳಿ, ಬೆಂಗಳೂರು ಪೂರ್ವ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ.
7. ಗಣಕಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.